**ಅ. ದಾ. ಸಂ. ಃ 296/2013**
**ಡಿ.ಡಬ್ಲ್ಯೂ ಃ 01**

**ದಿನಾಂಕ ಃ 05-06-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ವಾದಿಯ ಪರ ಶ್ರೀ. ಟಿ.ಪಿ. ವಕೀಲರಿಂದ ಃ-**

ನಿಮ್ಮ ತಂದೆಯವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 7 ಜನ ಎಂದು ನುಡಿಯುತ್ತಾರೆ. ಸದರಿಯವರು ಯಲ್ಲಮ್ಮ, ನೀಲಮ್ಮ, ಯಲ್ಲಪ್ಪ, ಕೃಷ್ಣಪ್ಪ, ಮುನಿರಾಜು, ನಾಗರಾಜು ಮತ್ತು ಗೋಪಾಲಕೃಷ್ಣ. ಸದರಿ ಕೃಷ್ಣಪ್ಪ ಹಾಗೂ ಮುನಿರಾಜು ಮರಣ ಹೊಂದಿರುತ್ತಾರೆ. ವಾದಿಯ ತಾಯಿಯ ಹೆಸರು ಯಲ್ಲಮ್ಮ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಯಲ್ಲಮ್ಮ ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ಅಕ್ಕ ಎಂದು ನುಡಿಯುತ್ತಾರೆ. ನಿಮ್ಮ ತಾತನವರಿಗೆ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ಸೋಲೂರು ಸಿದ್ದಪ್ಪ ನವರು ಎಲ್ಲಾ ಆಸ್ತಿಯನ್ನು ಲಪಟಾಯಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ.

2. ವಾದಿಯವರು ಯಾವ ಯಾವ ಸ್ವತ್ತಿಗಳಿಗೆ ಕೇಸನ್ನು ಹಾಕಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಯಾವ ಯಾವ ಸ್ವತ್ತುಗಳು ಎಂದರೆ ಸಾಕ್ಷಿ ಸರ್ವೆ ನಂಬರ್-6/3, ಸರ್ವೆ ನಂಬರ್-6/1, ಸರ್ವೆ ನಂಬರ್-1/2 ಹಾಗೂ ಸರ್ವೆ ನಂಬರ್-14/2 ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನಿಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವೇನಾದರೂ ಭಾಗ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆಯ ಕಾಲದಲ್ಲಿಯೇ ಎಲ್ಲಾ ಭಾಗ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ತಾಯಿಯವರ ಹತ್ತಿರ ಇರುತ್ತದೆಂದು ನುಡಿಯುತ್ತಾರೆ.

ವಾದಿಯವರ ತಾಯಿಗೆ ಭಾಗ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಆ ಸಂಬಂಧ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವ ಚಾಲ್ತಿಯಲ್ಲಿದ್ದಾಗಲೇ ದಿಃ 11-01-2017 ರಂದು 2 ಮತ್ತು 3 ನೇ ಪ್ರತಿವಾದಿ ರವರಿಂದ ಹಕ್ಕುನಿವೃತ್ತಿ ಪತ್ರ ಬರೆಯಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**